# ಈ ಶತಮಾನದ ಬಗ್ಗೆ ಬಹಳ ಭಯವಿದೆ, ಅದು ಹಳೆಯದನ್ನೇ ಮರುಕಳಿಸುತ್ತದೆ...

**ಅನಘ ಜೆ. ಕೋಲತ್ | ಮಲಯಾಳಂ**

1 ಬರವಣಿಗೆ ಎನ್ನುವುದು ಹೆಚ್ಚು ಪೂರ್ವಯೋಜಿತವಲ್ಲದ, ಬಹಳ ಧೈರ್ಯವನ್ನು ಬಯಸುವ ಮತ್ತು ಪ್ರಾಮಾಣಿಕವಾದ ಒಂದು ಪ್ರಕ್ರಿಯೆ. ಅದೊಂದು ಸಹಜವಾದ ಪ್ರತಿಫಲನ. ಅದನ್ನು ಸಾಧ್ಯವಿದ್ದಷ್ಟೂ ಚೆಂದಗಾಣಿಸಲು ನಾವು ಪ್ರಯತ್ನಿಸುತ್ತೇವೆ. ಆಲೋಚನೆಗಳು ಚೆಲ್ಲಾಪಿಲ್ಲಿಯಾಗಿ ಚದುರಿದಂತೆ ಅನಿಶ್ಚಿತವಾಗಿರಬಹುದು. ಆದರೆ ಅದರಲ್ಲಿರುವ ಅವ್ಯಕ್ತ ವಿನ್ಯಾಸವನ್ನು ಗುರುತಿಸುವುದು ಮತ್ತು ಅವುಗಳನ್ನು ತಾಳ್ಮೆಯಿಂದ ನಿರ್ವಹಿಸುವುದೇ ಬರವಣಿಗೆಯ ಉದಾತ್ತವಾದ ಮತ್ತು ಸೂಕ್ಷ್ಮವಾದ ವಿಧಾನ. ಆ ಬಳಿಕ ಸಂಕಲನವೆನ್ನುವುದು ಇನ್ನೂ ಮುಖ್ಯವಾದ ಹಂತ. ನನ್ನ ಪಾಲಿಗೆ 'ಬರವಣಿಗೆ' ಎನ್ನುವುದು ಸಾಮಾಜಿಕ ಚಟುವಟಿಕೆ ಎಂಬುದಕ್ಕಿಂತ ಅದೊಂದು ಸ್ವಯಂ ಪ್ರತಿಫಲನವಾಗಿದೆ. ವ್ಯಕ್ತಿ ಮತ್ತು ಸಮಾಜದ ನಡುವಿನ ಅವಿನಾಭಾವ ಸಂಬಂಧವೇ ಇಲ್ಲಿ ಮಹತ್ವದ್ದಾಗಿದೆ. ತನ್ನನ್ನು ತಾನು ಅರ್ಥ ಮಾಡಿಕೊಳ್ಳುವುದೇ ಸಮಾಜದ ವಿಮರ್ಶೆಯಾಗಬಹುದು. ಈವರೆಗಿನ ಕಲಿಕೆ ಮತ್ತು ಬರವಣಿಗೆಯಲ್ಲಿ ನನಗೆ, 'ನಾನು' ಮತ್ತು 'ಸಮಾಜ' ಎಂಬೆರೆಡರ ಗಡಿಗಳನ್ನು ಗುರುತಿಸುವುದು ಸಾಧ್ಯವಾಗಿಲ್ಲ. ಆದರೆ ನಾನು ಸಮಾಜದೆಡೆಗಿನ ಕಾಲ್ಪನಿಕ ಬಾಗಿಲನ್ನೂ, ವೈಯಕ್ತಿಕದೆಡೆಗೆ ತಕ್ಕಮಟ್ಟಿಗಿನ ಪ್ರವೇಶ ಸಾಧ್ಯತೆಯನ್ನು ಒದಗಿಸುವ ಪರದೆಯನ್ನೂ ಊಹಿಸಿಕೊಳ್ಳಬಲ್ಲೆ.

2 ಒಬ್ಬ ಮನುಷ್ಯಳಾಗಿ ನಾನು ಸಮಾಜದಲ್ಲಿ ಅನ್ಯಾಯ ಮತ್ತು ಅಸಮಾನತೆಯನ್ನು ಸೃಷ್ಟಿಸುವ ಎಲ್ಲ ರೀತಿಯ ಶ್ರೇಣೀಕೃತ ವ್ಯವಸ್ಥೆಯನ್ನು ವಿರೋಧಿಸುತ್ತೇನೆ. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯು ಜನರಲ್ಲಿ ತಾರತಮ್ಯವನ್ನು ಸೃಷ್ಟಿಸುತ್ತದೆ. ಪಿತೃಪ್ರಧಾನ ಪರಿಕಲ್ಪನೆಯೂ ಇದೇ ಕೆಲಸವನ್ನು ಮಾಡುತ್ತದೆ ಎಂದು ಗೊತ್ತಿದ್ದರೂ ನಾವು ಇದನ್ನು ಯಾವುದೇ ವಿಷಾದವಿಲ್ಲದೆ ಮುಂದುವರೆಸುತ್ತಿದ್ದೇವೆ. ಐದು ವರ್ಷಗಳ ಹಿಂದೆ, ಟ್ರಾನ್ಸ್‌ಜೆಂಡರ್‌ಗಳನ್ನು ತೃತೀಯಲಿಂಗಿಗಳೆಂದು ಗುರುತಿಸಲಾಯಿತು. ಹಾಗಾದರೆ, ಪ್ರಥಮ ಮತ್ತು ದ್ವಿತೀಯ ಲಿಂಗಿಗಳು ಯಾರು ಎಂದು ಅವರು ಪ್ರಶ್ನಿಸಿದರು. ಅಂದರೆ, ನಮಗೆ ಅರಿವಿಲ್ಲದೆಯೇ ನಾವು ಸಕಾಲಿಕವಲ್ಲದ ವ್ಯವಸ್ಥೆಯನ್ನು ಅನುಸರಿಸುತ್ತಿದ್ದೇವೆ. ಇವೆಲ್ಲ ಬರಹ ಲೋಕದ ವಸ್ತುಗಳೂ ಹೌದು.

3 ಹೊಸ ಜಗತ್ತಿನ ದೃಷ್ಟಿಕೋನ ಮತ್ತು ಗ್ರಹಿಕೆಯು ಬಹಳ ಪ್ರಗತಿಪರವಾಗಿದೆ. ಇದು ಯಾವ ರೀತಿಯ ಸವಾಲುಗಳನ್ನು ಒಡ್ಡಬಹುದು ಎಂಬ ಬಗ್ಗೆ ನನಗೆ ಸುಳಿವು ದೊರೆಯುತ್ತಿಲ್ಲ. ನಕಲಿ ಪ್ರಗತಿಪರ ಸಮೂಹವು ಹೆಣ್ಣನವನ್ನು ಹೆಚ್ಚು ಪ್ರತಿಪಾದಿಸುತ್ತ ಕೊಡುವ ಭಾಷಣ, ಉಪನ್ಯಾಸಗಳು ಸಮಾಜದಲ್ಲಿ ಒಂದು ಸುಳ್ಳು ಭರವಸೆಯನ್ನು ಮೂಡಿಸುತ್ತಿವೆ. ಬದಲಾವಣೆ ಆಗುತ್ತಿದೆ, ಆದರೆ